VIDYAVARDHAKA LAW COLLEGE LIBRARY MYSURU

0201/2046/0521

**II Semester 3 Year LL.B./V Semester 5 Year B.A. LL.B./B.B.A. LL.B./ VI Semester 5 Year B.Com. LL.B./B.A. LL.B. (Maj.-Min. System) B.B.A. LL.B. Examination, Jan./Feb. 2025 (Odd Sem.)**

**CONTRACT – II**

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**

**2. Q. No. 9 carries 20 marks and the remaining questions carry 16 marks each.**

**3. Answers should be written either in English or Kannada completely.**

Q. No. 1. What is contract of guarantee ? Explain the rights of a surety. Marks : 16

ಜಾಮೀನುದಾರಿಕೆ ಕರಾರು ಎಂದರೇನು ? ಜಾಮೀನುದಾರನ ಹಕ್ಕುಗಳನ್ನು ವಿವರಿಸಿರಿ.

Q. No. 2. Define 'Bailment'. Explain the rights of a Bailee. Marks : 16

ನಿಕ್ಷೇಪಣೆಯನ್ನು ವ್ಯಾಖ್ಯಾನಿಸಿರಿ ಮತ್ತು ಒಬ್ಬ ನಿಕ್ಷೇಪಿತನ(ಸರಕನ್ನು ಪಡೆದುಕೊಂಡವನ) ಹಕ್ಕುಗಳನ್ನು ವಿವರಿಸಿರಿ.

Q. No. 3. Who is an agent ? Explain the different modes of termination of agency. Marks : 16

ಕಾರ್ಯಭಾರಿ ಎಂದರೆ ಯಾರು ? ಕಾರ್ಯಭಾರವನ್ನು ಕೊನೆಗೊಳಿಸಲು ಇರುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 4. Discuss the various modes of dissolution of a partnership firm. Marks : 16

ಒಂದು ಪಾಲುದಾರಿಕಾ ಸಂಸ್ಥೆಯನ್ನು ವಿಸರ್ಜಿಸಲು ಇರುವ ವಿವಿಧ ವಿಧಾನಗಳನ್ನು ಚರ್ಚಿಸಿರಿ.

P.T.O.

Q. No. 5. 'No one can transfer a better title than he himself has' – Explain this principle with exceptions, if any. Marks : 16

'ಯಾವುದೇ ವ್ಯಕ್ತಿಯು ತಾನು ಹೊಂದಿದ ಹಕ್ಕಿಗಿಂತ ಹೆಚ್ಚಿನ ಹಕ್ಕನ್ನು ಹಸ್ತಾಂತರ ಮಾಡಲಾರನು'. ಈ ಸಿದ್ಧಾಂತವನ್ನು ಅಪವಾದಗಳಿದ್ದರೆ ಅವುಗಳೊಂದಿಗೆ ವಿವರಿಸಿರಿ.

Q. No. 6. Explain contract of indemnity and distinguish between contract of guarantee and contract of indemnity. Marks : 16

ನಷ್ಟಭರ್ತಿ ಕರಾರನ್ನು ವಿವರಿಸಿರಿ ಮತ್ತು ಜಾಮೀನುದಾರಿಕೆ ಕರಾರು ಹಾಗೂ ನಷ್ಟಭರ್ತಿ ಕರಾರಿನ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಸಿರಿ.

Q. No. 7. Define conditions and warranties. Explain implied conditions. Marks : 16

ಷರತ್ತು ಮತ್ತು ಖಾತರಿಯನ್ನು ವ್ಯಾಖ್ಯಾನಿಸಿರಿ. ಅವ್ಯಕ್ತ ಷರತ್ತುಗಳನ್ನು ವಿವರಿಸಿರಿ.

Q. No. 8. Write short notes on **any two** of the following : Marks : 2×8=16

ಈ ಕೆಳಗಿನ ಯಾವುದೇ **ಎರಡರ** ಮೇಲೆ ಲಘು ಟಿಪ್ಪಣಿಯನ್ನು ಬರೆಯಿರಿ :

(a) Pledge.

ಗಿರವಿ(ಒತ್ತೆ).

(b) Undisclosed principal.

ಅಪ್ರಕಟಿತ ಯಜಮಾನ.

(c) Implied authority of partner.

ಪಾಲುಗಾರನ ಅವ್ಯಕ್ತ ಅಧಿಕಾರ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದೇ **ಎರಡು** ಸಮಸ್ಯೆಗಳನ್ನು ಬಿಡಿಸಿರಿ :

(a) 'A', 'B' and 'C' are partners in a partnership firm. 'C' retires without giving a public notice. 'D' an old customer deals with the firm without notice of this retirement. 'D' wants to hold 'C' also liable. Advice 'D'.

'ಅ' 'ಬ' ಮತ್ತು 'ಕ' ಒಂದು ಪಾಲುದಾರಿಕಾ ಸಂಸ್ಥೆಯಲ್ಲಿ ಪಾಲುದಾರರಾಗಿರುತ್ತಾರೆ. 'ಕ' ನು ಸಾರ್ವಜನಿಕ ಸೂಚನೆಯನ್ನು ನೀಡದೆ ನಿವೃತ್ತಿಯಾಗುತ್ತಾನೆ. 'ಡ' ಎಂಬ ಹಳೆಯ ಗ್ರಾಹಕನು ಈ ನಿವೃತ್ತಿಯ ಅರಿವಿಲ್ಲದೆ ಪಾಲುದಾರಿಕಾ ಸಂಸ್ಥೆಯೊಂದಿಗೆ ವ್ಯವಹರಿಸುತ್ತಾನೆ. 'ಡ' ನು 'ಕ'ನನ್ನು ಸಹ ಹೊಣೆಗಾರನನ್ನಾಗಿ ಮಾಡಲು ಬಯಸುತ್ತಾನೆ. 'ಡ' ಗೆ ಸಲಹೆಯನ್ನು ನೀಡಿರಿ.

(b) 'A' entrusted some books to 'B' for binding. 'B' promised to complete the work and to return the same within 10 days. 'B' failed to return the books within the agreed time. Subsequently the books were burnt in an accidental fire in 'B's premises. Can 'A' recover damages from 'B' for the loss of these books ? Give reasons.

'ಅ' ನು ಕೆಲವು ಪುಸ್ತಕಗಳನ್ನು ಬೈಂಡ್ ಮಾಡಲು 'ಬ'ನಿಗೆ ಒಪ್ಪಿಸಿದನು. ಆ ಕೆಲಸವನ್ನು 10 ದಿನಗಳಲ್ಲಿ ಮಾಡಿ ಅವುಗಳನ್ನು ಮರಳಿಸುವುದಾಗಿ 'ಬ' ನು ವಚನ ನೀಡಿದನು. 'ಬ' ನು ಒಪ್ಪಂದದ ಅವಧಿಯೊಳಗೆ ಅವುಗಳನ್ನು ಮರಳಿಸಲು ವಿಫಲನಾದನು. ಅದಾದ ಮೇಲೆ ಆ ಪುಸ್ತಕಗಳು ಆಕಸ್ಮಿಕ ಅಗ್ನಿಯಿಂದ 'ಬ'ನ ಆವರಣದಲ್ಲಿ ಸುಟ್ಟುನಾಶವಾದವು. 'ಅ' ನು 'ಬ' ನಿಂದ ಪುಸ್ತಕಗಳ ನಾಶದಿಂದ ಆದ ನಷ್ಟಕ್ಕೆ ಪರಿಹಾರವನ್ನು ವಸೂಲಿಮಾಡಬಹುದೇ ? ಕಾರಣಗಳನ್ನು ನೀಡಿರಿ.

(c) 'A' agrees to purchase 20 tons of apple juice from 'B' on a specified date. 'B' crushes the apple and puts the juice ready for delivery on that specified date. But 'A' delays taking delivery and the juice becomes putrid and has to be thrown away.
Is 'A' liable to pay the price ? Decide.

ಒಂದು ನಿಗದಿಪಡಿಸಿದ ದಿನದಂದು 'ಅ'ನು 'ಬ'ನಿಂದ 20 ಟನ್ ಸೇಬುರಸವನ್ನು ಕೊಳ್ಳಲು ಕರಾರು ಮಾಡಿಕೊಳ್ಳುತ್ತಾನೆ. 'ಬ'ನು ಆ ನಿಗದಿಪಡಿಸಿದ ದಿನದಂದು ಸೇಬುಹಣ್ಣಿನ ರಸ ತೆಗೆದು 'ಅ' ನಿಗೆ ರಸವನ್ನು ಒಪ್ಪಿಸಲು ಸಿದ್ಧನಾಗುತ್ತಾನೆ. ಆದರೆ 'ಅ'ನು ಅದನ್ನು ಸ್ವೀಕರಿಸಲು ವಿಳಂಬ ಮಾಡಿದ್ದರಿಂದ ಆ ರಸ ಕೊಳೆತುಹೋಗಿ ಚೆಲ್ಲಬೇಕಾಯಿತು. 'ಅ'ನು ಅದರ ಬೆಲೆಯನ್ನು ಸಂದಾಯಮಾಡಲು ಹೊಣೆಗಾರನೇ ? ನಿರ್ಣಯಿಸಿರಿ.